ವಿವರ ಒಪ್ಪಿಸಿದರೂ ನಿಮ್ಮ ಮನಸ್ಸು ಅದನ್ನು ಅರೆಮನಸ್ಸಿನಿಂದಲೇ ಸ್ವೀಕರಿಸುತ್ತದೆ. ಆದರೆ ಅದೇ ಕೆಲ ಫೋಟೊಗಳಲ್ಲಿ ನಿಮಗೆ ಬಂದು ತಲುಪಿದರೆ ನಿಜವೆನಿಸಿ ಮನಸ್ಸಿನಲ್ಲಿ ಕೂತುಬಿಡುತ್ತದೆ. ಇದರಿಂದ ನೀವೇ ಕೆಲ ವಿವರಗಳನ್ನು ಕಟ್ಟಿಕೊಳ್ಳುವಿರಿ. ಎಷ್ಟು ಜನ ಸೇರಿದ್ದರು, ಯಾವ ಪಕ್ಷದ ಜನ ಸೇರಿದ್ದರು, ಯಾವ ಸಿದ್ಧಾಂತದ ಜನ ಸೇರಿದ್ದರು, ಯಾವ ಜಾತಿಯ ಜನ ಸೇರಿದ್ದರು ಹೀಗೆ ಏನೆಲ್ಲ ಅನಿಸಿಕೆಗಳು ನಿಮ್ಮೊಳಗೆ ಚಿತ್ರಗಳಿಂದ ರೂಪುಗೊಳ್ಳತೊಡಗುತ್ತವೆ. ಯಾವುದೇ ಅಪಘಾತದ ಚಿತ್ರ ನೋಡಿದರೆ ಅದರ ಭೀಕರತೆ ತಕ್ಷಣ ನಿಮ್ಮ ಗಮನಕ್ಕೆ ಬರುತ್ತದೆ. ಇಲ್ಲವಾದರೆ ರಾಜ ಮಹಾರಾಜರು ತಮ್ಮ ಚಿತ್ರಗಳನ್ನು ಯಾಕೆ ತೆಗೆಸಿಕೊಳ್ಳುತ್ತಿದ್ದರು. ಅನೇಕ ಸಲ ಚಿತ್ರಗಳ ಆಧಾರದ ಮೇಲೆ ಅವರ ವ್ಯಕ್ತಿತ್ವವನ್ನು ನಾವು ಕಟ್ಟಿಕೊಂಡಿದ್ದೇವೆ. ಅರಮನೆಗೆ ಹೋಗಿ ಅಕ್ಬರ್‌ನಾಮಾ, ಬಾಬರ್‌ನಾಮಾಗಳಲ್ಲಿ ಚಿತ್ರಗಳನ್ನು ರೂಪಿಸಿದ ಕಲಾವಿದರಿದ್ದಂತೆ ಅಲ್ಲಿಗೆ ಹೋಗದ ಕಲಾವಿದರು ಕೂಡ ಇದ್ದರಲ್ಲವೆ? ಅವರು ಎಂಥ ಚಿತ್ರಗಳನ್ನು ಇಳಿಸುತ್ತಿದ್ದರು? ಅವರ ಮಾಹಿತಿ ಎಲ್ಲಿದೆ? ಅವರೆಲ್ಲಾ ಯಾಕೆ ಚರಿತ್ರೆಯಲ್ಲಿ ಯಾಕೆ ಎದ್ದುಕಾಣಲಿಲ್ಲ? ಇದು ನನ್ನನ್ನು ಸದಾ ಕಾಡುವ ಪ್ರಶ್ನೆ. ಚಿತ್ರಕಲೆಯ ಪ್ರಜಾತಾಂತ್ರಿಕ ವ್ಯವಸ್ಥೆ ನಾಶವಾದ ಸ್ಥಿತಿಯಿದು. ಹೀಗೆ ಅರಮನೆಯ ಹೊರಗಿದ್ದವರು ತಮ್ಮ ಸುಖದುಃಖದ ಚಿತ್ರಗಳನ್ನು ಬರೆದಿರಬಹುದು, ಕೃಷಿಯ ಚಿತ್ರಗಳನ್ನು ಬರೆದಿರಬಹುದು. ನೇಕಾರರು, ಕಮ್ಮಾರರು, ಚಪ್ಪಲಿ ಹೊಲಿಯುವವರು, ಕುದುರೆ ಕಾಯುವವರು, ಸಾಧುಗಳು, ಕೆರೆಯಲ್ಲಿ ಎಮ್ಮೆ ತೊಳೆಯುವರ ಚಿತ್ರಗಳನ್ನು ಬರೆದಿರಬಹುದು. ಬರಗಾಲದ, ಯುದ್ಧದಲ್ಲಿ ತೀರಿಕೊಂಡವರ, ಸ್ಮಶಾನಗಳ ಚಿತ್ರ ಬರೆದಿರಬಹುದು. ಭಾರತೀಯ ಚಿತ್ರಕಲೆಯ ಪರಂಪರೆ ಬಗ್ಗೆ ಮಾತಾಡುವಾಗ ಇವರೆಲ್ಲರ ಉಲ್ಲೇಖವೇ ಆಗುವುದಿಲ್ಲ.

ನಮ್ಮ ಚಿತ್ರಕಲಾ ಪರಂಪರೆ ಯಾವಾಗಲೂ ಅಪೂರ್ಣ ಇತಿಹಾಸವನ್ನೇ ಕಟ್ಟಿಕೊಟ್ಟಿದೆ. ಇದನ್ನು ನಾವು ದಾಖಲಿಸಲಿಲ್ಲ, ಹುಡುಕಲಿಲ್ಲ. ಹೇಳಿ ಮಾಡಿಸಿದ ಚಿತ್ರಗಳಿಗಿಂತ, ತಮಗೆ ಅನಿಸಿದ್ದನ್ನು ಚಿತ್ರ ಮಾಡಿದ ಕಲಾವಿದರು ಎಲ್ಲಿ ಹೋದರು? ಅವರ ಕಲೆ ಏನಾಯಿತು? ಒಬ್ಬ ಆಸ್ಥಾನದ ಕವಿ ಇರುವಂತೆ ಹಾದಿಬೀದಿಯಲ್ಲಿ ಹಾಡುತ್ತಾ ಅಲೆಯುವ ಒಬ್ಬ ಲಲ್ಲಾದೇವಿ ಕೂಡ ಇರುತ್ತಾಳಲ್ಲವೆ? ಯಾವುದೇ ಕಲೆಯಲ್ಲಿ ಎರಡು ಪ್ರಶ್ನೆಗಳಿರುತ್ತವೆ: ಒಂದು, ಏನನ್ನು ಚಿತ್ರಿಸಬೇಕು; ಎರಡು, ಹೇಗೆ ಚಿತ್ರಿಸಬೇಕು, ಏನನ್ನು ಚಿತ್ರಿಸಬೇಕು ಎನ್ನುವುದು ನಮ್ಮ ವಿಚಾರಧಾರೆಗೆ ಸಂಬಂಧಿಸಿದ್ದು. ಜೊತೆಗೆ ನಮ್ಮ ನೆನಪುಗಳಿಗೆ ಸಂಬಂಧಿಸಿದ್ದಾಗಿದೆ. ಈಗ ಯಾರಾದರೂ ಹಳ್ಳಿಯಲ್ಲಿ ಹುಟ್ಟಿ ಬೆಳೆದಿದ್ದರೆ, ನಗರದ ಸಂಪರ್ಕವೇ ಇಲ್ಲದಿದ್ದರೆ ಸಹಜವಾಗಿಯೇ ಅವರ ಚಿತ್ರಗಳಲ್ಲಿ ಹಳ್ಳಿಯ ನೆನಪುಗಳೇ ಅವಕಾಶ ಪಡೆದುಕೊಂಡಿರುತ್ತವೆ. ಎರಡನೆಯದು, ಅಂದರೆ ಹೇಗೆ ಚಿತ್ರಿಸಬೇಕು ಎಂಬುದು ನಮ್ಮ ಕೌಶಲ್ಯಕ್ಕೆ ಸಂಬಂಧಪಟ್ಟ ಸಂಗತಿ. ನಿಮಗೆ ಅದರ ವ್ಯಾಕರಣ ಗೊತ್ತಿಲ್ಲದಿದ್ದರೆ ಅದನ್ನು ಚಿತ್ರಿಸಲಾಗುವುದಿಲ್ಲ. ಭಾರತದ ಚಿತ್ರಕಲಾ ಪರಂಪರೆಯನ್ನು ನೀವು ನೋಡಿದರೆ, ಪ್ರಾಚೀನ ಕಾಲದಿಂದ ರಾಜಾ ರವಿವರ್ಮಾನವರೆಗೆ– ಅಂದರೆ 1840ರವರೆಗೆ– ಅಜಂತಾದಲ್ಲಿ ಜಾತಕ ಕಥೆಗಳನ್ನು ಚಿತ್ರಿಸಿದ, ಅಥವಾ ಅನೇಕ ಮಠ ಮಂದಿರಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತದ ಚಿತ್ರಗಳನ್ನು ತೆಗೆದ ಕಲಾವಿದರಿಗೆ ಸ್ವಾತಂತ್ರ್ಯವಿತ್ತೆ? ಅವರಿಗೆ ಸ್ವಾತಂತ್ರ್ಯವಿದ್ದರೆ ಮೇಲಿನ ಚಿತ್ರಗಳನ್ನು ಅವರು ತೆಗೆಯುತ್ತಿದ್ದರೆ? ನಾನು ಹೇಳಬಯಸುತ್ತಿರುವುದೇನೆಂದರೆ, ಭಾರತೀಯ ಚಿತ್ರಕಲೆ ನಿಸ್ಸಂದೇಹವಾಗಿ ಕೌಶಲ್ಯಾಧಾರಿತವಾದದ್ದೇ ಹೊರತು ವಿಚಾರಧಾರೆಗೂ, ಕಲಾವಿದನ ವೈಯಕ್ತಿಕ ಆಯ್ಕೆಗೂ ಅದಕ್ಕೂ ಸಂಬಂಧವಿಲ್ಲ. ಏನನ್ನು ಚಿತ್ರಿಸಬೇಕು ಎಂಬ ಅಧಿಕಾರ ಅವರಿಗಿರಲಿಲ್ಲ.

ಮಣ್ಣಿನ ದೀಪಗಳನ್ನು ಮಾಡುತ್ತಾರಲ್ಲ ಅವರನ್ನು ನೋಡಿ. ಅದನ್ನು ಮಾಡುವುದು ಅವರಿಗೆ ಇಷ್ಟವಿಲ್ಲ. ಆದರೂ ಮಾಡಲೇಬೇಕು. ಯಾಕೆಂದರೆ ಅದು ಮಾರಾಟವಾಗುತ್ತದೆ. ದೀಪಾವಳಿ ಸಂದರ್ಭದಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಾಡಬೇಕು. ಯಾಕೆಂದರೆ ಬೇಡಿಕೆ ಹೆಚ್ಚಿರುತ್ತದೆ. ಆದರೆ ಇದು ಕಲೆಯ ಮಾರ್ಗವಲ್ಲ. ಇದು ಬೇಡಿಕೆಯನ್ನು ಅವಲಂಬಿಸಿದೆ. ಇದೇ ರೀತಿ ಭಾರತೀಯ ಚಿತ್ರಕಲೆ ಪ್ರಭುತ್ವ ಮತ್ತು ಧರ್ಮದ ಬೇಡಿಕೆಗಳನ್ನು ಪೂರೈಸುತ್ತ ಬಂದಿದೆ. ರಾಜಾರವಿವರ್ಮಾ ಕೂಡ ಇದಕ್ಕೆ ಹೊರತಲ್ಲ. ಆತನ ಕೌಶಲ್ಯವನ್ನು ನಾವ್ಯಾರೂ ಅಲ್ಲಗಳೆಯುವಂತಿಲ್ಲ. ಆತ